**OS NO.76/2022**
**DW-1**

<u>**ಸಾಕ್ಷಿಯನ್ನು ಇಂದು ದಿನಾಂಕ 19.06.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**</u>

<u>**ಮುಖ್ಯ ವಿಚಾರಣೆಃ ಶ್ರೀ ಇ ಎಸ್ ಕೆ ಪ್ರತಿವಾದಿ ಪರ ವಕೀಲರಿಂದ**</u>

ನಾನು ನನ್ನ ಮುಖ್ಯ ವಿಚಾರಣೆ ಸಾಕ್ಷಿಯ ಪ್ರಮಾಣ ಪತ್ರ ಸಲ್ಲಿಸಿದ್ದು, ಅದರಲ್ಲಿ ಹೇಳಿ ಬರೆಯಿಸಿರುವ ಎಲ್ಲ ಸಂಗತಿಗಳು ಸತ್ಯವಾಗಿದ್ದು, ಸದರಿ ಸಂಗತಿಗಳನ್ನು ನನ್ನ ಸೂಚನೆಯ ಮೇರೆಗೆ ಬರೆದಿರುತ್ತಾರೆ.

**(ಈ ಹಂತದಲ್ಲಿ ವಾದಿ ಪರ ವಕೀಲರು ಪಾಟಿ ಸವಾಲಿಗೆ ತಯಾರಾಗಿದ್ದು ಪಾಟಿ ಸವಾಲನ್ನು 03.00 ಗಂಟೆಗೆ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು,
ಸೇಡಂ.

**ಪಾಟಿ ಸವಾಲು ಶ್ರೀ ಎನ್ ಆರ್ ವಾದಿ ಪರ ವಕೀಲರಿಂದಃ-**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ನನ್ನ ತಂದೆಯ ಹೆಸರು ಅಬ್ದುಲ್ ಸರ್ಕಾರ್. ನನ್ನ ತಂದೆಗೆ ನಾವು ಇಬ್ಬರು ಮಕ್ಕಳು. ನನ್ನ ಸಹೋದರನ ಹೆಸರು ನಜೀರ್ ಮೀಯ. ನನ್ನ ತಂದೆ ಸಾಯುವುದಕ್ಕೂ ಮೊದಲು ನಾಲ್ಕು ವರ್ಷ ಮುನ್ನಾ ನಜೀರ್ ಮೀಯ ತೀರಿಹೋಗಿದ್ದರು ಎಂದರೆ ಸರಿಯಲ್ಲ. ಮರಣ ಪ್ರಮಾಣ ಪತ್ರ ನಮ್ಮ ತಂದೆಯವರದುಮಾತ್ರ ಇಲ್ಲ ನನ್ನ ಸಹೋದರನದು ಮಾತ್ರ ಇದೆ. ನನ್ನ ತಂದೆ ಮರಣದ ನಂತರ ಮ್ಯುಟೇಷನ್ ಮಾಡಿಕೊಂಡಿದ್ದೇನೆ. ಮ್ಯುಟೇಷನ್ ಮಾಡಿಕೊಳ್ಳುವುದಕ್ಕೆ ಅರ್ಜಿ ಸಲ್ಲಿಸುವಾಗ ಯಾವಾಗ ತೀರಿಹೋಗಿದ್ದಾರೆ ಎಂದು ನಮೂದಿಸಿರುತ್ತೇವೆ ಎಂದರೆ ಸರಿ. ಹಯಾದ್ ಬೇಗಂರವರು ನನ್ನ ಮೇಲೆ ದೂರು ದಾಖಲು ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಹೆಂಡತಿ ಕಿರುಕುಳ ಕೊಟ್ಟಿದ್ದೇನೆ ಎಂದು ಕಲಂ 498 (ಎ) ಐ ಪಿ ಸಿ ಅಡಿಯಲ್ಲಿ ನನ್ನ ಮೇಲೆ ಪ್ರಕರಣದಾಖಲಾಗಿದೆ ಎಂದರೆ ಸರಿಯಲ್ಲ. ಹಯಾದ್ ಬೇಗಂ ಮತ್ತು ನನ್ನ ಮಗ ಇಬ್ಬರು ಕೂಡಿ ಚಿಂಚೋಳ್ಳಿ ನ್ಯಾಯಾಲಯದಲ್ಲಿ ಕ್ರಿ ಮಿ 14/1998 ರಲ್ಲಿ ನನ್ನ ಮೇಲೆ ಪ್ರಕರಣ ದಾಖಲಿಸಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹಯಾದ್

ಬೇಗಂ ನನ್ನ ಹೆಂಡತಿಯಲ್ಲ ಎಂದರು ನುಡಿಯುತ್ತಾರೆ. ಸದರಿ ಪ್ರಕರಣದಲ್ಲಿ ನನಗೆ ನ್ಯಾಯಾಲಯದಿಂದ ನೋಟೀಸು ಬಂದ ನಂತರ ವಕೀಲರ ಮೂಲಕ ನಾನು ಹಾಜರಾಗಿದ್ದೇನೆ ಎಂದರೆ ಸರಿಯಲ್ಲ. ಅದೇ ಪ್ರಕರಣದಲ್ಲಿ ನಾನು ಹಯಾದ್ ಬೇಗಂ ನನ್ನ ಹೆಂಡತಿ ಅಲ್ಲ ಎಂದು ಯಾವ ತಕರಾರನ್ನು ಸಲ್ಲಿಸಿದ್ದಿಲ್ಲ ಎಂದರೆ ಅವರು ನನ್ನ ಹೆಂಡತಿ ಅಲ್ಲ ಎಂದು ನುಡಿಯುತ್ತಾರೆ. ಅದೇ ಪ್ರಕರಣದಲ್ಲಿ ನನ್ನ ಹೆಂಡತಿ ಮತ್ತು ಮಗನಿಗೆ ತಲಾ 2000/- ರೂ. ಕೊಡುವುದಾಗಿ ಆದೇಶ ಆಗಿತ್ತು ಎಂದರೆ ಸರಿಯಲ್ಲ. ನಮ್ಮ ಜನಾಂಗದಲ್ಲಿ ಮದುವೆಯಾದಾಗ ನಿಖಾನಾಮಾ ಬರೆಯುತ್ತಾರೆ ಎಂದರೆ ಸರಿ.

ಹಯಾದ್ ಬೇಗಂ ರವರ ಜೊತೆ ನನ್ನ ಮದುವೆಯಾಗಿ ನಿಖಾನಾಮಾ ನಮ್ಮ ಮನೆಯಲ್ಲಿ ಇದೆ ಎಂದರೆ ಸರಿಯಲ್ಲ. ನಿಖಾನಾಮಾವನ್ನು ಖಾಜಿ ಬರೆಯುತ್ತಾರೆ ಮತ್ತು ಅದನ್ನು Wakf Board ಗೆ ಕಳುಹಿಸುತ್ತಾರೆ ಎಂದರೆ ಸರಿ.  ಸಾಮಾನ್ಯವಾಗಿ ನಿಖಾನಾಮಾ Wakf Board ಗೆ ಕಳುಹಿಸಿಲ್ಲ ಎಂದರೆ ನನಗೆ ಅದರ ಬಗ್ಗೆ ಗೊತ್ತಿಲ್ಲ.

ರಜಿಯಾ ನನ್ನ ಪತ್ನಿ ನಮ್ಮ ಮದುವೆಯ ನಿಖಾನಾಮಾವನ್ನು ಕೂಡ ಕಳುಹಿಸಿಲ್ಲ ಎಂದರೆ ಸಾಕ್ಷಿಯು ನಮ್ಮ ಮದುವೆ ಬೇರೆ ಕಡೆಯಾಗಿದೆ ಎಂದು ನುಡಿಯುತ್ತಾರೆ. ನಮ್ಮ ಮದುವೆ ಹೂವಿನಳ್ಳಿ ಚಿಂಚೋಳ್ಳಿ ತಾಲೂಕಿನಲ್ಲಿ ಜರುಗಿತ್ತು. 28 ವರ್ಷದ ಹಿಂದೆ ನನ್ನ ಮತ್ತು ಹಯಾದ್ ಬೇಗಂ ಮದುವೆಯಾಗಿತ್ತು ಎಂದರೆ ಸರಿಯಲ್ಲ. ಜವಾರ್ ನಗರವನ್ನು ಈ ಮೊದಲು ಆಡ್ಕಿ ಹೂಡ (ಸಣ್ಣ ಹಳ್ಳಿ) ಎಂದು ಕರೆಯುತ್ತಿದ್ದರು ಎಂದರೆ ಸರಿ. ಮದುವೆಯಾದ ನಂತರ ನಾವಿಬ್ಬರು ಜೊತೆಗಿದ್ದೆವು ಎಂದರೆ ಸರಿಯಲ್ಲ. ನಮಗೆ ಸಲಾಮುದ್ದಿನ್ ಎಂಬ ಮಗ ಜನಿಸಿದ್ದನು ಎಂದರೆ ಸರಿಯಲ್ಲ. ಸಲಾಮುದ್ದೀನ್ ನನ್ನ ಮಗ ಹೌದೋ ಇಲ್ಲವೋ ಎಂದು ರಕ್ತ ಪರೀಕ್ಷೆ ಮಾಡಿಸಲು ತಯಾರಿಲ್ಲ. ಹಯಾದ್ ಬೇಗಂ ನನ್ನ ಪತ್ನಿ ಎಂದರೆ ಸರಿಯಲ್ಲ. ಜೀವನಾಂಶ ಕೊಡಬೇಕಾಗುತ್ತದೆ ಎಂಬ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ  ಸರಿಯಲ್ಲ. ಚಿಂಚೋಳ್ಳಿ ನ್ಯಾಯಾಲಯದಲ್ಲಿ ಆದೇಶ ಆಗಿದ್ದರು ಆಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ  ಸರಿಯಲ್ಲ. ನನ್ನ ಹಳ್ಳಿಯಲ್ಲಿ ಸತ್ತಾರ್ ರವರ ಮಗ ಸರ್ದಾರ್ ಮೀಯಾ ಎಂಬುವವರು ನಾನೊಬ್ಬನೇ ಇದ್ದೇನೆ ಎಂದರೆ ಸರಿ.

ಹಾಯಾದ್ ಬೇಗಂ ಈ ಮೊದಲು ಹೈದ್ರಾಬಾದ್ ನಲ್ಲಿ ಕೆಲಸ ಮಾಡುತ್ತಿದ್ದರು, ಈಗ ಅನಾರೋಗ್ಯದ ಕಾರಣ ಅವರು ತಮ್ಮನ್ನು ನೋಡಿಕೊಳ್ಳಲಾಗದ ಕಾರಣ ಜೀವನಾಂಶ ಕೇಳುತ್ತಿದ್ದಾರೆ ಎಂದರೆ ಸಾಕ್ಷಿಯು ನನ್ನ ಹೆಂಡತಿ ಅಲ್ಲ ಎಂದು ನುಡಿಯುತ್ತಾರೆ. ನನ್ನ ಹೊಲದ ಆದಾಯ ಮತ್ತು ಬೇರೆಯವರ ಹೊಲದಲ್ಲಿ ಕೃಷಿಯಿಂದ ಬರುವ ಆದಾಯವನ್ನು ಎಲ್ಲಾ ಒಟ್ಟಾಗಿ ಸೇರಿಸಿ ವಾರ್ಷಿಕ ಆದಾಯ 5 ಲಕ್ಷ ರೂ. ಬರುತ್ತದೆ ಎಂದರೆ ಸರಿಯಲ್ಲ. ಪ್ರತಿ ತಿಂಗಳು ಹಯಾದ್ ಬೇಗಂ ರವರ ವೈಯಕ್ತಿಕ ಖರ್ಚಿಗೆ 10000- ರೂ. ಬೇಕಾಗುತ್ತದೆ ಎಂದರೆ ಅವಶ್ಯಕತೆ ಇಲ್ಲ ಎಂದು ನುಡಿಯತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು,
ಸೇಡಂ.

Defendant is present.

Both counsels are present.

Defendant examined as DW1 by filing examination in chief by way of affidavit. Counsels for plaintiff cross examined DW-1 fully.

Counsel for defendant prays time for further evidence of DW1.

Time granted.

Call on 24.06.2024.

Civil Judge, Sedam.